# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.61-2013 ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಕಾಶ್ ರಾಜೇ ಅರಸ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 01-06-2024.** |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಆರ್ ವಕೀಲರಿಂದಃ**

ನಾನು ಪತ್ರಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತೇನೆ ನಿಪಿ-1 ಅನ್ನು ಬರೆಯಲು ಉಭಯ ಪಕ್ಷಕಾರರು ಮಾಹಿತಿ ನೀಡಿರುತ್ತಾರೆ. ಸದರಿಯವರ ಹೆಸರುಗಳನ್ನು ನಾನು ಪತ್ರ ನೋಡಿದರೆ ಹೇಳಬಲ್ಲೆ ಪತ್ರ ಬರೆಯುವ ಪೂರ್ವದಲ್ಲಿ ಕರಡು ತಯಾರು ಮಾಡಬೇಕೆಂಬ ನಿಯಮ ಇರುತ್ತದೆ ಎಂದರೆ ಸರಿಯಲ್ಲ. ಪತ್ರವನ್ನು ತಯಾರು ಮಾಡಿದ ನಂತರ ಕರಡು ಪ್ರತಿಯನ್ನು ನೀಡಲುವುದಿಲ್ಲ ಬದಲಾಗಿ ಪತ್ರವನ್ನು ಉಭಯ ಪಕ್ಷಕಾರರಿಗೆ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಅವರುಗಳ ಸಹಿ ಪಡೆಯುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1 ಅನ್ನು ಎಷ್ಟು ಗಂಟೆಗೆ ತಯಾರು ಮಾಡಲಾಯಿತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಿಪಿ-1 ಅನ್ನು ನನ್ನ ಕಚೇರಿಯಲ್ಲಿ ತಯಾರು ಮಾಡಲಾಗಿರುತ್ತದೆ. ನಾನು ನಿಪಿ-1 ಅನ್ನು ತಯಾರು ಮಾಡಿದ ಸಮಯ ಉಭಯ ಪಕ್ಷಕಾರರು ಮತ್ತು ಸಾಕ್ಷಿದಾರರು ಇದ್ದರು. ಯಾರು ಎಷ್ಟು ಹಣವನ್ನು ನೀಡಿದರು ಮತ್ತು ಯಾರು ಹಣವನ್ನು ತೆಗೆದುಕೊಂಡರು ಎಂಬ ಪ್ರಶ್ನೆಗೆ ಸಾಕ್ಷಿ ಹಣಕಾಸಿನ ವ್ಯವಹಾರವು ನನ್ನ ಸಮಕ್ಷಮದಲ್ಲಿ ನಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಉಭಯ ಪಕ್ಷಕಾರರು ನೀಡಿದ ಮಾಹಿತಿ ಆಧಾರದ ಮೇರೆಗೆ ಪತ್ರವನ್ನು ತಯಾರು ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸಹ

ನಿಪಿ–1 ಅನ್ನು ಎಲ್ಲಿಯೋ ತಯಾರು ಮಾಡಿ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**